**ಸಿ.ಸಿ. ನಂ. 1054/2023**

**ಪಿಡಬ್ಲ್ಯೂ-1**

ದಿಃ 05-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ HSD ವಕೀಲರಿಂದ**

ಈ ಕೇಸಿನಲ್ಲಿ ಹೇಳಿರುವ ಚೆಕ್ಕನ್ನು ಒಂದು ಬಾರಿ ಬ್ಯಾಂಕಿಗೆ ನಗದೀಕರಿಸಿಕೊಳ್ಳಲು ಸಲ್ಲಿಸಿರುತ್ತೇನೆ. ದಿನಾಂಕ ನೆನಪಿಲ್ಲ. ಬ್ಯಾಂಕಿನವರು ಕೊಟ್ಟಂತಹ ಹಿಂಬರಹ ದಿನಾಂಕ ನೆನಪಿಲ್ಲ. ಚೆಕ್ಕಿನಲ್ಲಿರುವ ಆರೋಪಿಯ ಸಹಿಗೂ ಮತ್ತು ಚೆಕ್ಕಿನ ಮೇಲಿರುವ ಬರವಣಿಗೆಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಆರೋಪಿಯೇ ಬರೆಯಿಸಿ ತಂದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-1 ರ ಹಿಂದೆ ಫೋನ್ ನಂಬರ್ ನನ್ನದೇ. ಆರೋಪಿಗೆ ಸಾಲವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಹಣವನ್ನು ಆರೋಪಿಗೆ ಕೊಡುವ ಸಮಯದಲ್ಲಿ ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಹಣವನ್ನು ಬೆಜ್ಜುವಳ್ಳಿಯಲ್ಲಿ ಹಾಲಿನ ಡೈರಿ ಬಳಿ ಕೊಟ್ಟಿರುತ್ತೇನೆ. ನಾನು ಡೈರಿಯಲ್ಲಿ ಅಧ್ಯಕ್ಷನಾಗಿದ್ದ ದಿನದಿಂದ ಆರೋಪಿ ನನಗೆ ಪರಿಚಯ. ಬೆಜ್ಜುವಳ್ಳಿಯಿಂದ ಆರೋಪಿಯ ಊರಿಗೆ ಅಂದಾಜು 10 ರಿಂದ 12 ಕಿ.ಮೀ. ಇರಬಹುದು. ಆರೋಪಿಯು ಕಲ್ಲುಕೊಪ್ಪ ಡೈರಿಯಿಂದ ಬರುತ್ತಿದ್ದ. ಆದರೆ ಆತನ ನಿಜವಾದ ಊರು ನನಗೆ ಗೊತ್ತಿಲ್ಲ. ಆರೋಪಿಯು ಮದುವೆ ಮನೆಗೆ ಸಾಲ ಬೇಕೆಂದು ಕೇಳಿಪಡೆದುಕೊಂಡಿರುತ್ತಾನೆ. ನನ್ನ ಪಿರ್ಯಾದಿಯಲ್ಲಿ ಆರೋಪಿಯು ಮದುವೆ ಮನೆಗೆ ಸಾಲ ಕೇಳಿರುತ್ತಾನೆ ಎಂದು ಹೇಳಿರುತ್ತೇನೊ ಇಲ್ಲವೋ ನನಗೆ ನೆನಪಿಲ್ಲ.

ಆರೋಪಿಯು ದಿಃ13-08-2023 ರಂದು ಸಾಲ ಪಡೆದುಕೊಂಡಿರುತ್ತಾರೆ. ಅವರು ಅದಕ್ಕೆ ಮೊದಲೇ ಸಾಲ ಕೇಳಿದ್ದರು. ಬೆಜ್ಜುವಳ್ಳಿಯಿಂದ ಕಲ್ಲುಕೊಪ್ಪ ಸಾಧಾರಣವಾಗಿ ಸುಮಾರು 30 ರಿಂದ 40 ಕಿ.ಮೀ. ಆಗುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಯಾವತ್ತೂ ಕೂಡ ನಮ್ಮ ಹಾಲಿನ ಡೈರಿಯಲ್ಲಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಹಾಲಿನ ಡೈರಿಯಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ ಇಸವಿ ನೆನಪಿಲ್ಲ, ಅದರೆ ನಾನು ಡೈರಿಯ ಅಧ್ಯಕ್ಷನಾಗಿ ಚುನಾಯಿತನಾಗಿದ್ದೆ. ನಾನು ಅಧ್ಯಕ್ಷನಾಗಿದ್ದ

ಸಂದರ್ಭದಲ್ಲಿ ಸೆಕ್ರಟೆರಿ ಸುಧಾಕರ ಎಂಬುವವರು ಇದ್ದರು. ಹಾಲನ್ನು ತೆಗೆದುಕೊಳ್ಳುವುದು ಕೊಡುವುದನ್ನು ಸುಧಾಕರರವರೇ ಮಾಡುತ್ತಿದ್ದರು. ನನ್ನ ಅಧಿಕಾರ ಅವಧಿಯಲ್ಲಿ ಹಾಲಿನ ಡೈರಿಯಲ್ಲಿ ಅವ್ಯವಹಾರ ನಡೆಯುತ್ತಿತ್ತು ಎಂದು ಪೊಲೀಸ್ ಠಾಣೆಗೆ ದೂರು ಕೊಟ್ಟಿರುವುದಿಲ್ಲ. ಆರೋಪಿಯು ಅವರ ಅಕ್ಕ ಅಥವಾ ತಂಗಿ ಮದುವೆಗೆ ಸಂಬಂಧಪಟ್ಟಂತೆ ನನ್ನ ಬಳಿ ಸಾಲ ಕೇಳಿರುತ್ತಾರೆ. ಆರೋಪಿಯು ಸಾಲ ಕೇಳಿದರು ಎಂದು ಹೇಳುವ ವರ್ಷದಲ್ಲಿ ಆತನ ಅಕ್ಕತಂಗಿಗೆ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆ ತಾಯಿಗಳ ಬಗ್ಗೆ ಸಾಲ ಕೊಡುವ ಸಂದರ್ಭದಲ್ಲಿ ನಾನು ವಿಚಾರಣೆ ಮಾಡಿರುವುದಿಲ್ಲ. ಆರೋಪಿಯು ಹಾಲಿನ ಡೈರಿಯಲ್ಲಿ ಯಾವುದೇ ವ್ಯವಹಾರ ಮಾಡುವುದಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸಲ್ಲಿಸಿದಂತಹ ವಕಾಲತ್ತುನಾಮೆಯಲ್ಲಿರುವ ಸಹಿಗೂ ಮತ್ತು ನಿಪಿ-1 ಚೆಕ್ಕಿನ ಮೇಲಿರುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಮುಂದುವರಿದು ನಿಪಿ-1 ರ ಮೇಲಿರುವ ಸಹಿಯನ್ನು ಚಂದ್ರಶೇಖರರವರೇ ಹಾಕಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-1 ರ ಹಿಂಬದಿಯಲ್ಲಿ 1426 ಮತ್ತು 3116 ಎಂದು ಇದ್ದು ಅದನ್ನು ನಾನು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕಿನ ಹಿಂಬದಿಯಲ್ಲಿರುವ ಮೊಬೈಲ್ ನಂ. 9480394409 ನ್ನು ನಾನೇ ಬರೆದಿರುತ್ತೇನೆ.

ಚೆಕ್ಕನ್ನು ಬ್ಯಾಂಕ್ ಆಫ್ ಬರೋಡಾಗೆ ಸಲ್ಲಿಸಿರುತ್ತೇನೆ. ಬ್ಯಾಂಕ್ ಆಫ್ ಬರೋಡಾದವರು ಹಿಂಬರಹವನ್ನು ನವೆಂಬರ್ ಕೊನೆ ವಾರ ಅಥವಾ ಡಿಸೆಂಬರ್ ಮೊದಲನೇ ವಾರ ಕೊಟ್ಟಿರುತ್ತಾರೆ. ದಿನಾಂಕ ನೆನಪಿಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**ತೆ ನ್ಯಾ.ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**